ಅಭಿಯಾಚನೆ ಕ್ರಮಾಂಕ ೫೨—ಪುನರ್ವಸತಿ ಯೋಜನೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪುನರ್ವಸತಿ ಯೋಜನೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೨,೨೬,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೫೫,೦೦,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಲಾಗಿದೆ.

ಅಭಿಯಾಚನೆ ಕ್ರಮಾಂಕ ೫೩—ಮಂತೀಯ ಮತ್ತು ಧರ್ಮಾದಾಯ ಸಂಸ್ಥೆಗಳು ಇತ್ಯಾದಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮತೀಯ ಮತ್ತು ಧರ್ಮಾದಾಯ ಸಂಸ್ಥೆಗಳು ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೯,೭೧,೬೮,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಲಾಗಿದೆ.

ಅಭಿಯಾಚನೆ ಕ್ರಮಾಂಕ ೪೩—ಯೋಜನಾ ಇಲಾಖೆಯ ಅಭಿಯೋಚನೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಯೋಜನಾ ಇಲಾಖೆಯ ಅಭಿಯಾಚನೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೮,೩೭,೪೯.೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೦,೦೦,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಲಾಗಿದೆ.

ಪ್ರಶ್ನೋತ್ತರಗಳು

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಚಿಕ್ಕಬಳ್ಳಾಪುರಕ್ಕೆ ತಾಲ್ಲೂಕು ಮಟ್ಟದ ಕ್ರೀಡಾಂಗಣದ ನಿರ್ಮಾಣ

೧೭೭೪. ಶ್ರೀ ಕೆ. ಎಂ, ಮುನಿಯಪ್ಪ (ಚಿಕ್ಕಬಳ್ಳಾಪುರ).— ಮಾನ್ಯ ಪಾರ್ಟಾ ಯುವ ಜನಸೇವಾ ಕ್ರೀಡಾ ಹಾಗೂ ಪ್ರವಾಸೋದ್ಯಮ ರಾಜ್ಯ ಮಂತ್ರಿಗಳು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೇ.

೧. ಕೋಲಾರ ಜಿಲ್ಲೆಯ ಚಿಕ್ಕಬಳ್ಳಾಪುರದಲ್ಲಿ ತಾಲ್ಲೂಕು ಮಟ್ಟದಲ್ಲಿ ಕ್ರೀಡಾಂಗಣಕ್ಕೆ ಸರ್ಕಾರ ದವರು ಕೈಗೊಂಡಿರುವ ಕ್ರಮಗಳೇನು? ಹಾಗೂ ಎಷ್ಟು ಅವಧಿಯಲ್ಲಿ ಈ ಕಾರ್ಯವನ್ನು ಪೂರ್ಣ ಗೊಳಿಸಲಾಗುವುದು ?

ಶ್ರೀ. ಜೀವರಾಜ್ ಆಳ್ವ (ಪಾರ್ಟಾ ಪ್ರವಾಸೋದ್ಯಮ ಮತ್ತು ಯುವಜನಸೇವಾ ರಾಜ್ಯ ಸಚಿವರು)

೧. ಸರ್ಕಾರ ಈಗಾಗಲೇ ಚಿಕ್ಕಬಳ್ಳಾಪುರದಲ್ಲಿ ಕ್ರೀಡಾಂಗಣ ಕಟ್ಟಲು ೮,೭೩ ಲಕ್ಷ ರೂಗಳ ಅಂದಾಜುವೆಚ್ಚಕ್ಕೆ ಆಡಳಿತಾತ್ಮಕ ಅನುಮೋದನೆಯನ್ನು ೧೯೮೫ನೇ ಇಸವಿಯಲ್ಲಿ ಕೊಟ್ಟಿದೆ. ಜಿಲ್ಲಾ ಮಟ್ಟದ ಕ್ರೀಡಾಂಗಣ ಕಾರ್ಯ ಪೂರ್ಣಗೊಂಡ ನಂತರ ಚಿಕ್ಕಬಳ್ಳಾಪುರ ತಾಲ್ಲೂಕು ಕ್ರೀಡಾಂಗಣ ಕಾರ್ಯದ ಬಗ್ಗೆ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು

ಶ್ರೀ ಕೆ. ಎಂ. ಮುನಿಯಪ್ಪ (ಚಿಕ್ಕಬಳ್ಳಾಪುರ).—ಮಾನ್ಯ ಅಧ್ಯಕ್ಷರೇ, ಚಿಕ್ಕಬಳ್ಳಾಪುರ ಒಂದು ಉಪ ವಿಭಾಗ ಕೇಂದ್ರ ಸ್ಥಳ. ಇಲ್ಲಿ ಪ್ರಖ್ಯಾತಿಯಾದ ಆಟಗಾರರು ಇದ್ದರು. ರಾಜ್ಯ ಮಂತ್ತು ರಾಷ್ಟ್ರ ಮಟ್ಟದಲ್ಲಿ ಪ್ರತಿನಿಧಿಸುತ್ತಿದ್ದರು. ಇಂತಹ ಸ್ಥಳದಲ್ಲಿ ಕ್ರೀಡಾಂಗಣ ಇಷ್ಟು ದಿವಸವಾಗದಿರುವುದು ವಿಷಾದಕರ. ಇದನ್ನು ಎಷ್ಟು ದಿವಸದಲ್ಲಿ ಮಾಡಿಸಿಕೊಡ್ತುತ್ತೀರೆಂಬುದಕ್ಕೆ ಭರವಸೆಯನ್ನು ಕೊಡ ಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಜೀವರಾಜ್ ಆಳ್ವ.— ಮಾನ್ಯ ಅಧ್ಯಕ್ಷರೇ, ಚಿಕ್ಕಬಳ್ಳಾಪುರದಲ್ಲಿ ಕ್ರೀಡಾಂಗಣ ಕಟ್ಟಲೇ ಬೇಕೆಂಬುದನ್ನು ಒಪ್ಪುತ್ತೇನೆ. ಕಾರಣಾಂತರದಿಂದ ಹಾಗೂ ಹಣಕಾಸಿನ ಕೊರತೆ ಇರುವುದರಿಂದ

ವಿಳಂಬವಾಗಿದೆ. ಜಿಲ್ಲಾ ಕೇಂದ್ರಗಳಲ್ಲಿ ಆಗಂತ್ತಿರುವ ಕ್ರೀಡಾಂಗಣಗಳ ಕೆಲಸ ಮುಕ್ತಾಯವಾದ ನಂತರ ತಾಲ್ಲೂಕಿಂ ಮಟ್ಟದ ಕ್ರೀಡಾಂಗಣಗಳ ಕೆಲಸ ಪ್ರಾರಂಭಿಸಲಾಗುವುದು. ಬರುವರ್ಷದಲ್ಲಿ ಸ್ವಲ್ಪ ಹಣವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಂತ್ತೇನೆ. ಮಾನ್ಯ ಸದಸ್ಯರೂ ಕೂಡ ಅರ್ಧದಷ್ಟು ಹಣವನ್ನು ಒದಗಿಸಿದರೆ ಕಾರ್ಯ ಪ್ರಾರಂಭ ಮಾಡಲು ಅನುಕೂಲವಾಗುತ್ತದೆ.

ಅಗ್ಗದ ಬೆಲೆಯಲ್ಲಿ ಕನ್ನಡ ಪುಸ್ತಕಗಳನ್ನು ಮಾರಾಟ ಮಾಡುವುದು

೧೬೭೭. ಶ್ರೀ ಆರ್. ಎನ್. ನಾಯ್ಕ (ಭಟ್ಕಳ)—ಮಾನ್ಯ ವಾರ್ತಾ, ಪ್ರಸಾರ, ಯುವಜನ ಸೇವಾ, ಕ್ರೀಡಾ ಹಾಗೂ ಪ್ರವಾಸೋದ್ಯಮ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ

ಅ) ಈ ಹಿಂದೆ ಸರ್ಕಾರದವರು ಕನ್ನಡ ಪುಸ್ತಕಗಳನ್ನು ಪ್ರಕಟಿಸಿ ಅಗ್ಗದ ಬೆಲೆಗೆ ಮಾರಾಟ ಮಾಡುತ್ತಿದ್ದರೆ.

ಆ) ಹಾಗಿದ್ದಲ್ಲಿ ಪ್ರತಿ ಪುಸ್ತಕದ ಬೆಲೆ ಎಷ್ಟಾಗಿತು. ಮತ್ತು ಯಾವಾಗ ಮಾರಲಾಗಿತ್ತು ಹಾಗೂ ಮಂದ್ರಿಕರು ಯಾರ್ಯಾರು.

ಇ) ಈಗ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಪುಸ್ತಕವನ್ನು ಮುದ್ರಿಸಿ ಮಾರುವ ಯೋಜನೆಯನ್ನು ಇಟ್ಟು ಕೊಂಡಿದ್ದಾರೆಯೇ.

ಈ) ಹಾಗಿದ್ದಲ್ಲಿ, ಎಷ್ಟು ಪುಸ್ತಕಗಳು ಹಾಗೂ ಪ್ರತಿ ಪುಸ್ತಕದ ಬೆಲೆ ಎಷ್ಟಾಗುತ್ತದೆ?

ಶ್ರೀ ಜೀವರಾಜ್ ಆಳ್ವ(ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ರಾಜ್ಯಸಚಿವರು)

ಅ) ಹೌದು

ಆ) ೧೯೮೩ ಹಾಗೂ ೧೯೮೬ರಲ್ಲಿ ಪಟ್ಟಿಯನ್ನು ಲಗತ್ತಿಸಿದೆ.

ಇ) ಇಟ್ಟುಕೊಂಡಿದ್ದಾರೆ.

ಈ) ೩ ಪುಸ್ತಕಗಳು

೧) ಭಾರತ ಸಂವಿಧಾನ ಬೆಲೆ ರೂ. ೨೦—೦೦

೨) ಕರ್ನಾಟಕ ಗ್ರಾಮಸೂಚಿ ,, ೧೬—೭೫

೩) ಪುರಂಧರ ಸಾಹಿತ್ಯ ದರ್ಶನ (೪ ಸಂಪುಟಗಳು) ,, ೬೫—೦೦

೧೧೭ ಪುಸ್ತಕಗಳ ಹೆಸರು, ಮುದ್ರಕಾರ ಹೆಸರು ಮತ್ತು ದರ.

ಕ್ರಮ ಸಂಖ್ಯೆ	ಪುಸ್ತಕದ ಹೆಸರು	ಮುದ್ರಣಾಲಯದ ಹೆಸರು	ಪುಸ್ತಕದ ದರ
			ರೂ.ಪೈ.
೧	ಶ್ರೀಮುಖ	ಲೋಟಸ್ ಪ್ರಿಂಟರ್ಸ್, ಬೆಂಗಳೂರು	೧–೫೦
೨	ಚಂದ್ರಖಂಡ	ಅಶ್ವತ್ಥ್ ಪ್ರಿಂಟರ್ಸ್, ಬೆಂಗಳೂರು	೧–೫೦
೩	ಗೋಲ್ಕೊಂಡಾ ಮತ್ತು ವೈಶಾಖಿ	ಕಲ್ಲೇಶ್ ಪ್ರಿಂಟರ್ಸ್, ಬೆಂಗಳೂರು	೧–೫೦